
## ನಾನೇ ಆರಾಮಾಗಿದ್ದೀನಿ



ಸಾಂಪ್ರ ಮತ್ತು ಶೀಲಾ ನಡುವಿನ ವಿರಸ ಅತಿಯಾಗಿ ಕೋರ್ಟಿನವರೆಗೂ ಹೋಯಿತು. ಸಾಂಪ್ರ ನ್ಯಾಯಾಧೀಶರ ಬಳಿ ವಿನಂತಿಸಿದ: 'ಸಾಹೇಬರೆ, ನನಗೆ ಹೇಗಾದರೂ ಮಾಡಿ ವಿಚ್ಛೇದನ ಕೊಡಿಸಿ.' ನ್ಯಾಯಾಧೀಶರು ಕೇಳಿದರು, 'ನಿಮ್ಮಿಬ್ಬರ ನಡುವೆ ಇರೊ ಸಮಸ್ಯೆ ಏನು?' 'ನನ್ನ ಹೆಂಡತಿ ಶೀಲಾ, ನನ್ನ ಬಳಿ ಬೆಳ್ಳುಳ್ಳಿ ಸುಲಿಸ್ತಾಳೆ, ಈರುಳ್ಳಿ ಕತ್ತರಿಸ್ತಾಳೆ...' ಹೇಳಿದ ಸಾಂಪ್ರ.

'ಅದರಲ್ಲೇನು ಕಷ್ಟ, ಬೆಳ್ಳುಳ್ಳಿಯನ್ನು ಸ್ವಲ್ಪ ಬಿಸಿ ಮಾಡಿದರೆ ಸಿಪ್ಪೆ ಸುಲಭವಾಗಿ ಬಿಚ್ಚುತ್ತೆ, ಈರುಳ್ಳಿ ಕತ್ತರಿಸುವ ಮುಂಚೆ ಒಂದೈದು ನಿಮಿಷ ಫ್ರಿಡ್ಜ್‌ನಲ್ಲಿ ಇಟ್ಟರೆ ಕಣ್ಣು ಉರಿಯೋದಿಲ್ಲ, ಪಾತ್ರೆಗಳನ್ನು ಹದಿನೈದು ನಿಮಿಷ ನೀರಲ್ಲಿ ನೆನೆಸಿದರೆ ಸಾಕು. ಬಟ್ಟೆ ಕೂಡ ಅಷ್ಟೇ, ಅವುಗಳನ್ನು ಬಿಸಿ ನೀರಿನ ಸೋಪು ಪೌಡರ್‌ನಲ್ಲಿ...' ಸಾಂಪ್ರ ಅವರ ಮಾತನ್ನು ತುಂಡರಿಸಿ ಹೇಳಿದ: 'ಸಾಹೇಬರೇ, ಸಾಕು, ನಿಮ್ಮ ಪರಿಸ್ಥಿತಿ ನೋಡಿದರೆ ನಾನೇ ಆರಾಮ ಇದ್ದೇನೆ. ಕೇಸನ್ನು ವಾಪಸು ತಗೋತಿನಿ.'

**ತೈರೊಳ್ಳಿ ಮಂಜುನಾಥ ಉಡುಪ**



## ಅಸೂಯೆಯ ಪರಾಕಾಷ್ಠೆ!...

ಗುಂಡ ಅವಸರವಾಗಿ ಪೊಲೀಸ್ ಠಾಣೆಗೆ ಬಂದು, 'ಸಾರ್, ನಮ್ಮ ಪಕ್ಕದಮನೆಯವನ ಹೆಂಡತಿ ಕಾಣೆಯಾಗಿ ಮೂರು ತಿಂಗಳಾಯ್ತು' ಎಂದ. ಅವನ ದೂರು ಕೇಳಿದ ಪೊಲೀಸ್, 'ಅದು ಸರಿ, ಅದಕ್ಕೆ ನೀನು ಯಾಕೆ ದೂರು ಕೊಡಲು ಬಂದಿದ್ದೀಯಾ?' ಎಂದು ಕೇಳಿದಾಗ ಗುಂಡ, 'ಪಕ್ಕದ ಮನೆಯವನು ಏನೂ ಆಗದವನಂತೆ ಜಾಲಿಯಾಗಿ ತಿರುಗಾಡಿಕೊಂಡಿದ್ದಾನೆ. ನೀವೇ ಹೇಳಿ ಸಾರ್, ಇಂಥದ್ದನ್ನೆಲ್ಲಾ ಯಾರಿಗೆ ಸಹಿಸೋಕೆ ಆಗುತ್ತೆ?'

**ಅರ್ಚನಾ ವಿ. ರಾವ್**